# ಓದಿನ ನಡುವೆ ನಟನೆ



## ಶ್ರೇಯಾ ಅಂಚನ್

ಉದಯದ ‘ಅರಮನೆಯ’ಯ ಸ್ಮಿತಾ

★ *ಹಿರಿಯ ನಟರ ಜೊತೆಗಿನ ಕೆಲಸ ಹೇಗೆನಿಸುತ್ತದೆ?*

ಇದು ನನಗೆ ಮೊದಲ ಧಾರಾವಾಹಿ. ಆರಂಭದಲ್ಲಿ ಸಣ್ಣ ಭಯ ಇತ್ತು. ನಟರಾದ ಜೈಜಗದೀಶ್, ಪಂಡಿತ್ ಒಂದು ಕಾಲದ ಜನಪ್ರಿಯ ನಾಯಕ ನಟಿ ಸುಧಾರಾಣಿಯವರನ್ನು ನಾನು ಬೆಳ್ಳಿತೆರೆಯಲ್ಲಿ ಮಾತ್ರ ಕಂಡಿದ್ದೆ. ಅವರ ಜೊತೆ ನಟಿಸುವುದು ಎಂದರೆ ಖುಷಿಯೋ ಖುಷಿ. ವಿನಯಾ ಮೇಡಂ ಕೂಡ ನಮ್ಮ ತಂಡಕ್ಕೆ ಸೇರುವವರಿದ್ದಾರೆ. ಅವರ ಅನುಭವವನ್ನು ಪಡೆಯಲು ಇದೊಂದು ಅವಕಾಶ ಎಂದುಕೊಂಡಿದ್ದೇನೆ.

★ *100 ಕಂತಿನ ಏಳು ಬೀಳುಗಳ ಬಗ್ಗೆ ಹೇಳುವುದಾದರೆ...*

ಹೌದು. ಅರಮನೆ ತಂಡ 100 ಕಂತನ್ನು ದಾಟಿ ಹೋಗುತ್ತಿದೆ. ನಮ್ಮ ಶ್ರಮದ ಮಾನದಂಡ ಟಿಆರ್‌ಪಿ. ಅದೊಂದು ಮಾಯಾ ಮಾಪನ. ಅದರ ಆರಂಭವೇ 2.9ರಿಂದ ಶುರುವಾಗಿ 9ನ್ನು ತಲುಪಿದ್ದೆವು. ಜನಪ್ರಿಯತೆಯ ಯಶಸ್ಸಿನಿಂದ ನಿಧಾನಕ್ಕೆ ಕೆಳಗೆ ಇಳಿದು ಮತ್ತೆ ಏರುತ್ತಿದ್ದೇವೆ. ಹೀಗೆ ಇದರ ಏರಿಳಿತವನ್ನು ಬಿಟ್ಟು ಬೇರೆ ಇನ್ನೇನೂ ಬದಲಾವಣೆಯಿಲ್ಲ. ಒಟ್ಟಾರೆ ಸಮಾಜಮುಖಿ ಕಥೆ ಎನ್ನುವುದು ಮುಖ್ಯ.

★ *ಅಮ್ಮನ ಮಗಳು ಅಮ್ಮನ ಮದುವೆ ಬಗ್ಗೆ ಯಾಕೆ ಯೋಚಿಸುವುದಿಲ್ಲ?*

ನನಗೆ ಅಪ್ಪ ಬದುಕಿದ್ದಾರೆ ಎಂಬ ಸತ್ಯವನ್ನು ತಾಯಿ ಹೇಳಿದ್ದಾಳೆ. ಅಂದ ಮೇಲೆ ಒಂದಲ್ಲ ಒಂದು ದಿನ ಇಬ್ಬರೂ ಒಂದಾಗುತ್ತಾರೆ ಎನ್ನುವ ನಿರೀಕ್ಷೆ ಇರುತ್ತದೆ. ಆದರೆ ನನ್ನ ಸಹೋದರಿ ಅಪ್ಪನ ಜೊತೆ ಇದ್ದಾಳೆ. ಆಕೆಗೆ ಅಮ್ಮ ತೀರಿ ಹೋಗಿದ್ದಾಳೆ ಎಂದು ಅಪ್ಪ ಹೇಳಿದ್ದಾರೆ. ಆ ಕಾರಣಕ್ಕೆ ಅವಳು ಅಪ್ಪನ ಮದುವೆಗೆ ಮುತುವರ್ಜಿ ವಹಿಸುತ್ತಾಳೆ.

★ *ಟಿವಿ ಲೋಕಕ್ಕೆ ಹೇಗೆ ಬಂದಿದ್ದು?*

ನಮ್ಮೂರು ಮಂಗಳೂರು. ಅಪ್ಪ ಶೇಖರ್, ಅಮ್ಮ ಶಾರದಾ. ಅಪ್ಪ ಗುತ್ತಿಗೆದಾರ. ನಾನು ಬಿಕಾಂ ಓದುತ್ತಿದ್ದಾಗ ‘ಜೈ ತುಳು ನಾಡು’ ಎಂಬ ಸಿನಿಮಾದಲ್ಲಿ ನಟಿಸಿದ್ದೆ. ಅದರ ಹೊರತಾಗಿ ಶಾಸ್ತ್ರೀಯ ನೃತ್ಯವನ್ನು ಅಭ್ಯಾಸ ಮಾಡುತ್ತಿದ್ದೆ. ‘ಅರಮನೆ’ಗೆ ಡಾನ್ಸ್ ಪಾತ್ರಕ್ಕೆ ನಟಿ ಬೇಕಿತ್ತು. ನನಗೊಂದು ಅವಕಾಶ ಸಿಕ್ಕಿತು. ಅಂತಿಮ ಸೆಮಿಸ್ಟರ್ ಪರೀಕ್ಷೆ ಬಾಕಿ ಇತ್ತು. ಆದರೂ ಒಪ್ಪಿಕೊಂಡು ಬಂದೆ. ಇದೇ ಆಗಬೇಕು ಎನ್ನುವ ನಿರೀಕ್ಷೆ ಇರಲಿಲ್ಲ. ಈಗ ಇಲ್ಲೇ ನೆಲೆಸಬೇಕು ಎಂದು ಭಾವಿಸಿದ್ದೇನೆ. ಇದರ ಜೊತೆ ಓದನ್ನೂ ಮುಂದುವರಿಸುತ್ತೇನೆ. ಎಂಬಿಎ ಮಾಡುವ ಬಯಕೆ ಇದೆ. ಅದು ಮುಗಿದ ಮೇಲೆ ವೃತ್ತಿ ಬದುಕು ಯಾವುದು ಎಂದು ಯೋಚಿಸಬಹುದು. ಅಲ್ಲಿಯತನಕ ವಿದ್ಯಾಭ್ಯಾಸದ ಜೊತೆಗೆ ಅಭಿನಯ ಮಾಡುತ್ತೇನೆ. ಅವಕಾಶ ಒದಗಿಬಂದರೆ ಸಿನಿಮಾದಲ್ಲೂ ಒಂದು ಕೈ ನೋಡುತ್ತೇನೆ.

★ *ಬೆಂಗಳೂರು ಹೇಗೆನಿಸುತ್ತಿದೆ?*

ನಮ್ಮೂರು ಎಂದೆಂದೂ ಚಂದ. ಬಿಡುವು ಸಿಕ್ಕಾಗೆಲ್ಲ ಮಂಗಳೂರಿಗೆ ಹೋಗುತ್ತೇನೆ. ಮೂರುನಾಲ್ಕು ತಿಂಗಳ ಒಡನಾಟದಲ್ಲಿ ಇದೂ ನಮ್ಮೂರಿನಂತೆ ಅನ್ನಿಸುತ್ತಿದೆ. ಅದರಲ್ಲೂ ನಮ್ಮ ಸಂಬಂಧಿಗಳ ಮನೆಯಲ್ಲಿ ಇರುವುದರಿಂದ ಒಂಟಿತನ ಕಾಡಿಲ್ಲ. ನಾನೇ ಬೆಂಗಳೂರಿನವಳು ಆಗಿದ್ದರಿಂದಲೋ ಅಂತಹ ತೊಂದರೆಗಳೂ ಆಗಿಲ್ಲ.

ಡಾನ್ಸ್ ಅಭ್ಯಾಸ ಸ್ವಲ್ಪ ನಿಂತಿದೆ. ನನ್ನ ಗುರುಗಳು ಮಂಗಳೂರಿನವರು. ಆದ್ದರಿಂದ ಅದಕ್ಕೊಂದಿಷ್ಟು ತೊಂದರೆಯಾಗುತ್ತಿದೆ. ಅದನ್ನು ಬಿಟ್ಟರೆ ಬೇರೆ ಹೇಳುವಂತಹ ವ್ಯತ್ಯಾಸ ಏನೂ ಇಲ್ಲ. ನಮ್ಮೂರಲ್ಲಾದರೆ ಸೆಕೆ ಹೆಚ್ಚು. ಬೆಂಗಳೂರಿನಲ್ಲಿ ಹಿತವಾದ ವಾತಾವರಣ. ಹೀಗೆ ಎಲ್ಲಾ ಕಡೆ ಅನುಕೂಲವೂ ಇರುತ್ತೆ, ಅನಾನುಕೂಲವೂ ಇರುತ್ತವೆ. ನಾವು ಹೊಂದಿಕೊಳ್ಳಬೇಕು.

★ *ಮುಂದಿನ ಯೋಜನೆ ಏನು?*

ಎಂಬಿಎ ಮಾಡಬೇಕು. ಅದರ ಜೊತೆ ಅರಮನೆ ಇದ್ದೇ ಇರುತ್ತದೆ. ಭದ್ರವಾಗಿ ನೆಲೆಯೂರಬೇಕು. ನನ್ನದೇ ಎನ್ನುವ ಹೆಸರು ಸ್ಥಾಪಿಸಬೇಕು. ಆಮೇಲೆ ಮದುವೆ ಬಗ್ಗೆ ಯೋಚಿಸುತ್ತೇನೆ. ಏನಾದರೂ ನನ್ನಿಂದ ಆಯಿತು ಎನ್ನುವ ಮಟ್ಟಿನ ಸಾಧನೆಯಾದರೆ ಸಾಕು. ಅದಕ್ಕೆ ನಾನು ತೃಪ್ತ. ಒಟ್ಟಾರೆ ಒಳ್ಳೆಯದು.... ನೆನಪಿನಲ್ಲಿ ಉಳಿಯುವಂತಹ ಕಾರ್ಯ ನನ್ನಿಂದ ಆಗಬೇಕು ಎನ್ನುವುದು ಸದ್ಯದ ಬಯಕೆ.

■ ರಾಗು